**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು, ಮಡಿಕೇರಿ (ಕಾರ್ಯ ನಿರ್ವಹಣೆ ವೀರಾಜಪೇಟೆ).**
**ಸ್ಪೆಷಲ್ ಕೇಸ್. ನಂ. 5014/2020**

**ಪ್ರಾಸಾ ಃ 7**

**ಚಾಸಾ ಃ 7**

ಸಾಕ್ಷಿಯ ಹೆಸರು ಃ ಪಾರ್ವತಿ

ಗಂಡನ ಹೆಸರುಃ ರಾಜು

ವಯಸ್ಸು ಃ 32 ವರ್ಷ

ವೃತ್ತಿ ಃ ಕೂಲಿ ಕೆಲಸ

ವಿಳಾಸ ಃ ಐಯ್ಯನಕೆರೆ

ದಿಃ 17.05.2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

1. ಚಾಸಾ 1 ನನ್ನ ಅಣ್ಣ, ಮೃತ ಲಕ್ಷ್ಮಿ ಚಾಸಾ 1 ರವರ ಮಗಳು. ನಾನು ಅಯ್ಯನಕೆರೆ ಹಾಡಿಯಲ್ಲಿ ವಾಸವಾಗಿದ್ದೇನೆ. ಚಾಸಾ 1 ಹಾಗೂ ಆತನ ಹೆಂಡತಿ ಮಕ್ಕಳು ಅಯ್ಯನಕೆರೆ ಹಾಡಿಯಲ್ಲಿ ವಾಸವಾಗಿದ್ದರು. ನನಗೆ ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ಇದೆ, ಅವರು ನಮ್ಮ ಊರಿನ ಪಕ್ಕದ ಊರಿನವರು. ಆರೋಪಿಯು ನಮ್ಮ ಹಾಡಿಯಿಂದ ಕಾಫಿ ಕುಯ್ಯುವ ಕೆಲಸಕ್ಕೆ ಆಳುಗಳನ್ನು ಬಾಳೆಲೆ, ಪೊನ್ನಂಪೇಟೆ ಕಡೆಗೆ ಜೀಪಿನಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಲಕ್ಷ್ಮಿ ಯನ್ನೂ ಕೂಡ ಆರೋಪಿ ಕಾಫಿ ಕುಯ್ಯುವ ಕೆಲಸಕ್ಕೆ ಜೀಪಿನಲ್ಲಿ ಕರೆದುಕೊಂಡು ಹೋಗುತ್ತಿದ್ದರು.



2. ಜನವರಿ 2020 ರಲ್ಲಿ ಆರೋಪಿಯು ಲಕ್ಷ್ಮಿ ಕಾಫಿ ಕುಯ್ಯುವ ಕೆಲಸಕ್ಕೆ ಕರೆದುಕೊಂಡು ಹೋಗುತ್ತಿದ್ದರೂ, ಅದಕ್ಕಿಂತ ಮೊದಲೂ ಕೂಡ ಆರೋಪಿ ಲಕ್ಷ್ಮಿಯನ್ನು ಹಾಗೂ ಇತರರನ್ನು ಕಾಫಿ ಕುಯ್ಯುವ ಕೆಲಸಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಲಕ್ಷ್ಮಿ ಹಾಗೂ ಆರೋಪಿಗೆ ಪ್ರೀತಿ ಇದ್ದು, ಕಾಫಿ ಕುಯ ಯುವ ಕೆಲಸಕ್ಕೆ ಹೋಗುವಾಗ 2020 ಜನವರಿ ತಿಂಗಳಲ್ಲಿ ಆರೋಪಿಗೂ ಹಾಗೂ ಲಕ್ಷ್ಮಿಗೂ ಜಗಳ ಆಗಿತ್ತು. ಯಾವ ಕಾರಣಕ್ಕೆ ಎಂದು ಗೊತ್ತಿಲ್ಲ. ಅವರ ಜೊತೆ

ಕೆಲಸಕ್ಕೆ ಹೋದ ಬೇರೆ ಜನರು ನನಗೆ  ಆರೋಪಿಗೆ ಹಾಗೂ ಲಕ್ಷ್ಮಿಗೆ ಜಗಳ ಆಗಿದ್ದ ಬಗ್ಗೆ ಹೇಳಿರುತ್ತಾರೆ. ಜಗಳ ಆದ  ನಂತರ 2 ದಿನ ಲಕ್ಷ್ಮಿ ಕಾಫಿ ಕುಯ್ಯುವ ಕೆಲಸಕ್ಕೆ ಹೋಗಿರಲಿಲ್ಲ. 2-3 ದಿನದ ನಂತರ ಆರೋಪಿಯು ಬೇರೆ ಜನರನ್ನು ಕೆಲಸಕ್ಕೆ ಕರೆದುಕೊಂಡು ಹೋಗಿ ಬಿಟ್ಟು ವಾಪಸ್ಸು ಬಂದು ಲಕ್ಷ್ಮಿಯನ್ನು  ಬಾಳೆಲೆ ಕಡೆಗೆ ಕರೆದುಕೊಂಡು ಹೋಗಿ ಆಕೆಗೆ ವಿಷ ಕುಡಿಸಿ ಆಕೆಯನ್ನು ಹನಗೋಡು ಆಸ್ಪತ್ರೆಗೆ ದಾಖಲಿಸಿ ನಂತರ ಜನರಿಗೆ ಪ್ರಚಾರ ಮಾಡಿರುತ್ತಾರೆ.  ಸದರಿ ವಿಚಾರವನ್ನು  ನನಗೆ  ಲಕ್ಷ್ಮಿಯ ಅಕ್ಕ ಪಲ್ಲವಿ ತಿಳಿಸಿರುತ್ತಾರೆ.  ನಂತರ  ನಾನು ಹನಗೋಡು ಆಸ್ಪತ್ರೆಗೆ ಹೋಗಿರುತ್ತೇನೆ. ನಾನು ಹೋದಾಗ  ಅಲ್ಲಿ ಪಲ್ಲವಿ, ನನ್ನ ಅಣ್ಣ, ಅತ್ತಿಗೆ ಇದ್ದರು.  ನಾನು ಹನಗೋಡು ಆಸ್ಪತ್ರೆಗೆ ಹೋದಾಗ ಲಕ್ಷ್ಮಿ ಮಾತನಾಡುತ್ತಿದ್ದಳು. ಆಕೆಗೆ ವಿಚಾರಿಸಿದಾಗ  ಆರೋಪಿ ಆಕೆಗೆ  ವಿಷ ಕುಡಿಸಿದ್ದು, ನನ್ನನ್ನು  ಉಳಿಸಿಕೋ ಎಂದು ಹೇಳಿದಳು. ಆಕೆಯು ಹನಗೋಡು ಆಸ್ಪತ್ರೆಯಲ್ಲಿ 3 ದಿನ ಇದ್ದಳು. ಆಕೆಯ ಪರಿಸ್ಥಿತಿ ಗಂಭೀರ



ಆದ ಕಾರಣ ಆಕೆಯನ್ನು ಮೈಸೂರಿನ ಕೆ ಆರ್ ಆಸ್ಪತ್ರೆಗೆ ದಾಖಲಿಸಿರುತ್ತಾರೆ. 3 ದಿನಗಳ  ನಂತರ ಆಕೆ ಮೈಸೂರಿನ ಕೆ ಆರ್ ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾರೆ.  ಆರೋಪಿ ಲಕ್ಷ್ಮಿಗೆ ಯಾಕೆ ವಿಷ ಕುಡಿಸಿದ್ದರು ಎಂದು ನನಗೆ ಗೊತ್ತಿಲ್ಲ.  ನಾನು, ಚಾಸಾ 1 ಹಾಗೂ ಮೃತ ಲಕ್ಷ್ಮಿ ಜೇನುಕುರುಬರ ಜನಾಂಗಕ್ಕೆ ಸೇರಿದವರು. ಆರೋಪಿ ಕುರುಬಗೌಡ ಜನಾಂಗದವರು. ಪೊಲೀಸರು  ನನ್ನನ್ನು  ವಿಚಾರಿಸಿದ್ದರು. ಅವರು ಆಸ್ಪತ್ರೆಗೆ ಬಂದಿದ್ದರು.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು  ಮಾನ್ಯ ಪಿ ಪಿ ಯವರು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

2. ಆರೋಪಿಯು ಬೇರೆ ಹುಡುಗಿಯೊಂದಿಗೆ ಸಂಬಂಧ ಇಟ್ಟುಕೊಂಡ ವಿಚಾರ ಲಕ್ಷ್ಮಿಗೆ ತಿಳಿದು ಆಕೆ ಆರೋಪಿಯನ್ನು ಕೇಳಿದ್ದಕ್ಕೆ ಆರೋಪಿಯು 2020 ಜನವರಿ ತಿಂಗಳ ಕೊನೆಯಲ್ಲಿ  ಲಕ್ಷ್ಮಿಯೊಂದಿಗೆ ಕೆಲಸದವರ ಮುಂದೆ ಜಗಳ ಮಾಡಿದ್ದರಿಂದ  ಲಕ್ಷ್ಮಿ ಕೆಲಸಕ್ಕೆ ಹೋಗದೇ ಮನೆಯಲ್ಲೇ ಇದ್ದಳು ಎಂದರೆ ಸರಿ. ಆರೋಪಿಯು  ಬೇರೆ ಹುಡುಗಿಯನ್ನು ಪ್ರೀತಿಸುತ್ತಿದ್ದ ವಿಚಾರವನ್ನು

ಲಕ್ಷ್ಮಿಯು ಆರೋಪಿಯಲ್ಲಿ ಕೇಳಿದ ಕಾರಣ ಆರೋಪಿಯು ಲಕ್ಷ್ಮಿಯನ್ನು ಕೊಲೆ ಮಾಡುವ ಉದ್ದೇಶದಿಂದ ಆಕೆಗೆ ಕ್ರಿಮಿನಾಶಕ ಕುಡಿಸಿ ಆಕೆ ಮೃತಪಟ್ಟಿರುತ್ತಾಳೆ ಎಂದರೆ ಸರಿ.

.4.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

3. ನಾನು ಗ್ರಾಮ ಪಂಚಾಯತಿ ಸದಸ್ಯೆ ಎಂದರೆ ಸರಿ. ಆರೋಪಿ ವಾಸವಿರುವ ಉಡೆಪುರ ಗ್ರಾಮ ನಮ್ಮ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುತ್ತದೆ ಎಂದರೆ ಸರಿ. ನಾನು ಈಗ ಕಾಫಿ ತೋಟದ ಕೆಲಸಕ್ಕೆ ಹೋಗುವುದಿಲ್ಲ. ಮೊದಲು ಹೋಗುತ್ತಿದ್ದೆ. ನನಗೆ ಮಃ 3.00 ಗಂಟೆಯ ಸಮಯಕ್ಕೆ ವಿಷಯ ಗೊತ್ತಾಯಿತು. ನಮ್ಮ ಮನೆ ಲಕ್ಷ್ಮಿಯವರ ಮನೆಯಿಂದ ಕೂಗಳತೆಯ ದೂರದಲ್ಲಿ ಇದೆ. ಮಃ 3.00 ಗಂಟೆಯ ಸಮಯಕ್ಕೆ ನಾನು ಮನೆಯಲ್ಲೇ ಇದ್ದೆ. ನಮ್ಮ ಊರಿನಿಂದ ಹನಗೋಡು ಆಸ್ಪತ್ರೆಗೆ ಸುಮಾರು 6 ಕಿಮಿ ದೂರದಲ್ಲಿ ಇದೆ. ಅಲ್ಲಿಗೆ ವಾಹನ ಸೌಕರ್ಯಗಳು ಇವೆ. ನಾನು ಹನಗೋಡು ಆಸ್ಪತ್ರೆಗೆ ಹೋದಾಗ ಸಂಜೆ ಆಗಿತ್ತು, ಕತ್ತಲೆ ಆಗಿತ್ತು. ನಾನು ಹನಗೋಡು ಆಸ್ಪತ್ರೆಗೆ ಹೋದಾಗ ನನ್ನ ದೊಡ್ಡಣ್ಣ ಪೊಣ್ಣಪ್ಪ, ಹಾಗೂ ಅತ್ತಿಗೆ ಸಣ್ಣಮ್ಮ ಮತ್ತು ಪಲ್ಲವಿ ಇದ್ದರು, ಲಕ್ಷ್ಮಿಯ ತಂದೆ ತಾಯಿ ಬಂದಿರಲಿಲ್ಲ. ನಾನು ಆಸ್ಪತ್ರೆಗೆ ಹೋದಾಗ ಪೊಣ್ಣಪ್ಪ, ಸಣ್ಣಮ್ಮ, ಪಲ್ಲವಿ ಮತ್ತು ಲಕ್ಷ್ಮಿ ಮಾತ್ರ ಇದ್ದರು. ವಿಷಯ ತಿಳಿದ ತಕ್ಷಣ ನನಗೆ ಆಸ್ಪತ್ರೆಗೆ ಹೋಗಲು ಹಣಕಾಸಿನ ತೊಂದರೆ ಇತ್ತು. ನಂತರ ನನ್ನ ತಾಯಿಂದ ಹಣ ಪಡೆದುಕೊಂಡು ಆಸ್ಪತ್ರೆಗೆ ಹೋಗಿದ್ದೆ, ನನ್ನ ತಾಯಿ ನಮ್ಮೊಂದಿಗೆ ವಾಸವಾಗಿದ್ದರು. ನಾನು 3.00 ಗಂಟೆಗೆ ವಿಷಯ ಗೊತ್ತಾದ ಕೂಡಲೇ ಚಾಸಾ 1 ರವರ ಮನೆಗೆ ಹೋಗಿದ್ದೆ, ಆಗ ಅವರ ಮನೆಯಲ್ಲಿ ಚಿಕ್ಕ ಚಿಕ್ಕ ಮಕ್ಕಳು ಮಾತ್ರ ಇದ್ದರು. ಚಾಸಾ 3 ಪಲ್ಲವಿ ದೊಡ್ಡಮ್ಮನ ಮನೆಗೆ

.5.

ಹೋಗಿದ್ದ ವಿಚಾರ ನನಗೆ ಆಗ ಗೊತ್ತಾಯಿತು ಎಂದರೆ ಸರಿ. ನನಗೆ ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ಇಲ್ಲ ಎಂದರೆ ಸರಿಯಲ್ಲ. ಆರೋಪಿ ಲಕ್ಷ್ಮಿಗೆ ವಿಷ ಕುಡಿಸಿದ್ದ ವಿಷಯ ನನಗೆ 3.00 ಗಂಟೆಗೆ

ಗೊತ್ತಾಯಿತು. ನನಗೆ 3.00 ಗಂಟೆಗೆ ವಿಷಯ ಗೊತ್ತಾಗಿಲ್ಲ ಹಾಗೂ ನಾನು ಆಸ್ಪತ್ರೆಗೆ ಹೋಗಿಲ್ಲ ಎಂದರೆ ಸರಿಯಲ್ಲ. ನನಗೆ ಸಂಬಂಧದಲ್ಲಿ ಅತ್ತಿಗೆ ಆದವರು 3.00 ಗಂಟೆಗೆ ವಿಷಯ ತಿಳಿಸಿದ್ದರು. ಆರೋಪಿ ಹಾಗೂ ಲಕ್ಷ್ಮಿ ಪ್ರೀತಿಸುತ್ತಿದ್ದ ವಿಚಾರ ನನಗೆ ಮೊದಲೇ ಗೊತ್ತಿತ್ತು ಎಂದರೆ ಸರಿ. ಆಕೆ ಯಾವ ಯಾವ ದಿನ ಕೆಲಸಕ್ಕೆ ಹೋಗುತ್ತಿದ್ದಳು ಹಾಗೂ ಯಾವ ಯಾವ ದಿನ ಕೆಲಸಕ್ಕೆ ಹೋಗದೇ ಮನೆಯಲ್ಲೇ ಇರುತ್ತಿದ್ದಳು ಅನ್ನುವ ವಿಚಾರನ ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರಿದು ಜಗಳವಾದ ಬಳಿಕ 2 ದಿನ ಆಕೆ ಕೆಲಸಕ್ಕೆ ಹೋಗಿರಲಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಏನೂ ಗೊತ್ತಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಲಕ್ಷ್ಮಿ ಪ್ರೀತಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಲಕ್ಷ್ಮಿಗೂ ಜಗಳ ಆಗಿರುವ ವಿಷಯ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಹನಗೋಡು ಆಸ್ಪತ್ರೆಗೆ ಹೋದಾಗ ಲಕ್ಷ್ಮಿಯನ್ನು ವಿಚಾರಿಸಿದ್ದು, ಆಕೆ ಆರೋಪಿ ತನಗೆ ವಿಷ ಕುಡಿಸಿದ್ದಾರೆ ಎಂದು ನನ್ನ ಬಳಿ ಹೇಳಿದ್ದಾರೆ ಎಂದು ಇದೇ ಮೊದಲ ಬಾರಿ ನ್ಯಾಯಾಲಯದ ಮುಂದೆ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ಬೇರೆ ಹುಡುಗಿಯನ್ನು ಪ್ರೀತಿಸುತ್ತಿದ್ದ ವಿಚಾರವನ್ನು ಲಕ್ಷ್ಮಿಯು ಆರೋಪಿಯಲ್ಲಿ ಕೇಳಿದ ಕಾರಣ ಆರೋಪಿಯು ಲಕ್ಷ್ಮಿಯನ್ನು



ಕೊಲೆ ಮಾಡುವ ಉದ್ದೇಶದಿಂದ ಆಕೆಗೆ ಕ್ರಿಮಿನಾಶಕ ಕುಡಿಸಿ ಆಕೆ ಮೃತಪಟ್ಟಿರುತ್ತಾಳೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಹಾಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ ಕೂಡ ಚಾಸಾ 1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಣ್ಣ ಪೊಣ್ಣಪ್ಪ ಆರೋಪಿಯಿಂದ ಹಣ ಕೇಳಿದ್ದು, ಅವರು ಹಣ ಕೊಡಲು ನಿರಾಕರಿಸಿದ ಕಾರಣ ಪೊಣ್ಣಪ್ಪರವರು ಆರೋಪಿಯ ವಿರುದ್ದ ಸುಳ್ಳು ಪ್ರಕರಣ ದಾಖಲು ಮಾಡಿಸಿದ್ದು, ನಾನು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ,

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓಹೇಕೇ ಸರಿ ಇದೆ

Sd/-xxx

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಡಗು-ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ)

**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು, ಮಡಿಕೇರಿ (ಕಾರ್ಯ ನಿರ್ವಹಣೆ ವೀರಾಜಪೇಟೆ).**
**ಸ್ಪೆಷಲ್ ಕೇಸ್. ನಂ. 5014/2020**

**ಪ್ರಾಸಾ ః 8**

**ಚಾಸಾ ః 10**

ಸಾಕ್ಷಿಯ ಹೆಸರು ః ಪ್ರಿಯಾ

ತಂದೆಯ ಹೆಸರುಃ ಕೆಂಪ

ವಯಸ್ಸು ః 25 ವರ್ಷ

ವೃತ್ತಿ ః ಏನೂ ಇಲ್ಲ

ವಿಳಾಸ ః ಮಜ್ಜಿಗೆಹಳ್ಳ ಫಾರ್ಮ, ತಿತಿಮತಿ

ದಿಃ 17.05.2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

1. ನಾನು ತಿತಿಮತಿಯ ಮಜ್ಜಿಗೆಹಳ್ಳ ಫಾರ್ಮ ಎಂಬಲ್ಲಿ ವಾಸವಾಗಿದ್ದೇನೆ. ಚಾಸಾ 8 ನನ್ನ ತಂಗಿ. ನನಗೆ ಚಾಸಾ 1 ಹಾಗೂ ಅವರ ಪತ್ನಿಯ ಪರಿಚಯ ಇಲ್ಲ. ನನಗೆ ಲಕ್ಷ್ಮಿಯ ಪರಿಚಯ ಇದೆ, ಕೆಲಸಕ್ಕೆ ಹೋಗುವಾಗ ನನಗೆ ಆಕೆಯ ಪರಿಚಯ ಆಗಿರುತ್ತದೆ. ನನಗೆ ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ಇದೆ, ಅವರು ನಮ್ಮ ಊರಿನ ಜನರನ್ನು ಕೆಲಸಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಆರೋಪಿಯು ನನ್ನನ್ನು, ಚಾಸಾ 8, ಚಾಸಾ 9 ಮತ್ತು ಲಕ್ಷ್ಮಿ ಹಾಗೂ ಇತರರನ್ನು ಜೀಪಿನಲ್ಲಿ ಕೆಲಸಕ್ಕೆ ಕರೆದುಕೊಂಡು ಹೋಗುತ್ತಿದ್ದರು. 2020 ರಲ್ಲಿ ಬಾಳೆಲೆ ಕಡೆಗೆ ನಮ್ಮನ್ನು ಆರೋಪಿ ಜೀಪಿನಲ್ಲಿ ಕೆಲಸಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಜನವರಿ 2020 ರಲ್ಲಿ ಆರೋಪಿ ಹಾಗೂ ಲಕ್ಷ್ಮಿಗೆ ಜಗಳ ಆಗಿತ್ತು. ಯಾವ ವಿಷಯಕ್ಕೆ ಎಂದು ನನಗೆ ಗೊತ್ತಿಲ್ಲ.

.2.

ನಂತರ ಆಕೆ ಕೆಲಸಕ್ಕೆ ಬರಲಿಲ್ಲ. ಪೊಲೀಸರು ಬಂದು ಆಕೆ ವಿಷ ಕುಡಿದು ಮರಣಹೊಂದಿದ್ದಾರೆ ಎಂದು ಹೇಳಿದರು. ಇಷ್ಟನ್ನು ಹೊರತುಪಡಿಸಿ ನನಗೆ ಬೇರೆ ಏನೂ ಗೊತ್ತಿಲ್ಲ. ಆರೋಪಿ ಲಕ್ಷ್ಮಿಗೆ ವಿಷ ಕುಡಿಸಿದ್ದರಿಂದ ಆಕೆ ಮೃತಪಟ್ಟಿದ್ದಾರೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ಪೊಲೀಸರ ಸಮಕ್ಷಮ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಪಿ ಪಿ ಯವರು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

2. 2020 ಜನವರಿ ತಿಂಗಳ ಕೊನೆಯಲ್ಲಿ ಒಂದು ದಿನ ನಾನು, ಚಾಸಾ 8 ರವರು ಜೀಪಿನಲ್ಲಿ ಕೆಲಸಕ್ಕೆ ಹೋಗಿದ್ದು ಚಾಸಾ 8 ಜೀಪಿನ ಮುಂದಿನ ಸೀಟಿನಲ್ಲಿ ಕುಳಿತಿದ್ದ ವಿಚಾರಕ್ಕೆ ಜೀಪಿನಲ್ಲಿದ್ದ ಲಕ್ಷ್ಮಿಯು ಆರೋಪಿಯೊಂದಿಗೆ ಜಗಳ ಮಾಡಿದ್ದು ಇಬ್ಬರು ಕೈಯಿಂದ ಹೊಡೆದಾಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಲಕ್ಷ್ಮಿ 3-4 ದಿನ ಕೆಲಸಕ್ಕೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ದಿಃ 03.02.2020 ರಂ ದು ಬೆಳಿಗ್ಗೆ ಆರೋಪಿಯು ಅಯ್ಯನಕೆರೆ ಹಾಡಿಯಿಂದ ಕೆಲಸಕ್ಕೆ ಜನರನ್ನು ಕರೆದುಕೊಂಡು ಬಂದಿದ್ದು ತಿತಿಮತಿಯಲ್ಲಿ ನಾನು, ಚಾಸಾ 8, 9 ಹಾಗೂ ಇತರರು ಜೀಪಿಗೆ ಹತ್ತಿದ್ದು ಆಗ ಲಕ್ಷ್ಮಿ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನಮ್ಮನ್ನು ಬಾಳೆಲೆಯಲ್ಲಿ ಕಾಫಿ ಕುಯ್ಯಲು ಬಿಟ್ಟು ಜೀಪಿನೊಂದಿಗೆ ವಾಪಸ್ಸು ಹೋಗಿದ್ದು, ಆ ದಿನ ಸಂಜೆ



ಆರೋಪಿಯೊಂದಿಗೆ ಈಶ್ವರ ಎನ್ನುವವರು ಬಂದಿದ್ದು ಆರೋಪಿ ಸಂಜೆ ವಾಪಸ್ ಹೋಗುವಾಗ ತಿತಿಮತಿಯಲ್ಲಿ ಇಳಿದುಕೊಂಡರು ಎಂದರೆ ಸರಿಯಲ್ಲ. ನಮ್ಮನ್ನು ಈಶ್ವರ ತಿತಿಮತಿಯಲ್ಲಿ ಬಿಟ್ಟು ಉಳಿದವರನ್ನು ಅಯ್ಯನಕೆರೆ ಕಡೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯು ಬಾಳೆಲೆ ಸಮೀಪ ಲಕ್ಷ್ಮಿ ವಿಷ ಕುಡಿಸಿ ಆಕೆಗೆ ಕರೆದುಕೊಂಡು ಹೋಗಿ ಹನಗೋಡು ಆಸ್ಪತ್ರೆಗೆ ದಾಖಲು ಮಾಡಿ ನಂತರ ಲಕ್ಷ್ಮಿಯನ್ನು ಆಕೆಯ ಮನೆಯವರು ಮೈಸೂರಿನ ಕೆ ಆರ್ ಅಸ್ಪತ್ರೆಗೆ ದಾಖಲು ಮಾಡಿದ್ದು ಆಕೆ ದಿಃ 10.02.2020 ರಂದು ಮೃತಪಟ್ಟ ವಿಚಾರ ಗೊತ್ತಾಯಿತು ಎಂದರೆ ಸರಿಯಲ್ಲ. ಪ್ರೀತಿ ವಿಚಾರದಲ್ಲಿ ಆರೋಪಿಗೂ ಹಾಗೂ ಲಕ್ಷ್ಮಿಗೂ ಜಗಳ ಆಗಿ ಲಕ್ಷ್ಮಿಯನ್ನು

ಕೊಲ್ಲುವ ಉದ್ದೇಶದಿಂದ ಆರೋಪಿ ಬಾಳೆಲೆ ಸಮಿಪ ಲಕ್ಷ್ಮಿಗೆ ವಿಷ ಕುಡಿಸಿದ್ದರಿಂದ ಲಕ್ಷ್ಮಿ ಮೃತಪಟ್ಟ ವಿಚಾರ ನನಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ನಾನು ಈ ಬಗ್ಗೆ ಪೊಲೀಸರ ಸಮಕ್ಷಮ ದಿಃ **25.02.2020** ರಂದು ನನಗೆ ಈಗ ಓದಿ ಹೇಳಿದಂತೆ " ನಾನು —— ತಿಳಿದಿರುತ್ತದೆ" ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ನಿಪಿ **5** ಎಂದು ಗುರುತಿಸಲಾಯಿತು. ಆರೋಪಿ ಲಕ್ಷಿಯನ್ನು ಬಿಟ್ಟು ಚಾಸಾ **8** ರವರನ್ನು ಪ್ರೀತಿಸುತ್ತಿದ್ದರಿಂದ ಲಕ್ಷ್ಮಿ ಆರೋಪಿಯೊಂದಿಗೆ ಜಗಳ ಮಾಡಿದ್ದು, ಆ ಕಾರಣದಿಂದ ಆರೋಪಿ ಲಕ್ಷ್ಮಿಯನ್ನು ಕೊಲ್ಲುವ ಉದ್ದೇಶದಿಂದ ಆಕೆಗೆ ವಿಷ ಕುಡಿಸಿ ಆಕೆ ಮೃತಪಟ್ಟಿರುವ ವಿಚಾರ ಗೊತ್ತಿದ್ದರೂ ಕೂಡ ಹಾಗೂ ನಿಪಿ **5** ರಲ್ಲಿರುವ ಎಲ್ಲ ವಿಚಾರಗಳು



ಗೊತ್ತಿದ್ದರೂ ಕೂಡ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ**

**ಮರು ವಿಚಾರಣೆ ಇಲ್ಲ**.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓಹೇಕೇ ಸರಿ ಇದೆ

Sd/-xxx

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಡಗು-ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ)

**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು, ಮಡಿಕೇರಿ (ಕಾರ್ಯ ನಿರ್ವಹಣೆ ವೀರಾಜಪೇಟೆ).**
**ಸ್ಪೆಷಲ್ ಕೇಸ್. ನಂ. 5014/2020**

**ಪ್ರಾಸಾ ಃ 9**

**ಚಾಸಾ ಃ 9**

ಸಾಕ್ಷಿಯ ಹೆಸರು ಃ ಸುಮಾ
ಗಂಡನ ಹೆಸರುಃ ಮನು
ವಯಸ್ಸು ಃ 33 ವರ್ಷ
ವೃತ್ತಿ ಃ ನರ್ಸ್
ವಿಳಾಸ ಃ ತಿತಿಮತಿ
ದಿಃ 17.05.2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

1. ಚಾಸಾ 8 ಹಾಗೂ 10 ರವರು ನನ್ನ ನೆರೆಕೆರಯವರು. ನಾನು ತಿತಿಮತಿಯ ಮಜ್ಜಿಗೆಹಳ್ಳ ಫಾರ್ಮ ಎಂಬಲ್ಲಿ ವಾಸವಾಗಿದ್ದೆ. ನನಗೆ ಚಾಸಾ 1 ಹಾಗೂ ಅವರ ಪತ್ನಿಯ ಪರಿಚಯ ಇಲ್ಲ. ನನಗೆ ಲಕ್ಷ್ಮಿಯ ಪರಿಚಯ ಇದೆ. ನಾನು ಈ ಹಿಂದೆ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದು, 2020 ಜನವರಿ ತಿಂಗಳಿನಲ್ಲಿ ಊರಿಗೆ ಬಂದಾಗ ಕಾಫಿ ಕುಯ್ಯುವ ಕೆಲಸಕ್ಕೆ ಹೋಗುತ್ತಿದ್ದೆ. ಆರೋಪಿಯು ನಮ್ಮನ್ನು ಬಾಳೆಲೆ ಗ್ರಾಮಕ್ಕೆ ಕಾಫಿ ಕುಯ್ಯುವ ಕೆಲಸಕ್ಕೆ ಜೀಪಿನಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಒಂದು ದಿನ ಕೆಲಸಕ್ಕೆ ಜೀಪಿನಲ್ಲಿ ಹೋಗುತ್ತಿದ್ದಾಗ ಚಾಸಾ 8 ರವರು ಜೀಪಿನ ಮುಂದಿನ ಸೀಟಿನಲ್ಲಿ ಕುಳಿತಿದ್ದು ಆಗ ಲಕ್ಷ್ಮಿ ಹಾಗೂ ಆರೋಪಿಗೆ ಜಗಳ ಆಯಿತು. ನಂತರ ನಾನು ಜೀಪಿನಲ್ಲಿ ಕಾಫಿ ಕುಯ್ಯುವ ಕೆಲಸಕ್ಕೆ ಹೋಗಿಲ್ಲ. ನಂತರ ಚಾಸಾ 10 ರವರು ನನಗೆ ಲಕ್ಷ್ಮಿ



ವಿಷ ಸೇವಿಸಿ ಮೃತಪಟ್ಟಿದ್ದಾರೆ ಎಂದು ಹೇಳಿದರು. ಇಷ್ಟನ್ನು ಹೊರತುಪಡಿಸಿ ನನಗೆ ಬೇರೆ ಏನೂ ಗೊತ್ತಿಲ್ಲ. ಆರೋಪಿ ಲಕ್ಷ್ಮಿಗೆ ವಿಷ ಕುಡಿಸಿದ್ದರಿಂದ ಆಕೆ ಮೃತಪಟ್ಟಿದ್ದಾರೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ಈ

ಬಗ್ಗೆ ನಾನು ಪೊಲೀಸರ ಸಮಕ್ಷಮ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಪಿ ಪಿ ಯವರು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

2. 2020 ಜನವರಿ ತಿಂಗಳ ಕೊನೆಯಲ್ಲಿ ಒಂದು ದಿನ ನಾನು, ಚಾಸಾ 8 ದ 10 ರವರು ಜೀಪಿನಲ್ಲಿ ಕೆಲಸಕ್ಕೆ ಹೋಗಿದ್ದು ಚಾಸಾ 8 ಜೀಪಿನ ಮುಂದಿನ ಸೀಟಿನಲ್ಲಿ ಕುಳಿತಿದ್ದ ವಿಚಾರಕ್ಕೆ ಜೀಪಿನಲ್ಲಿದ್ದ ಲಕ್ಷ್ಮಿಯು ಆರೋಪಿಯೊಂದಿಗೆ ಜಗಳ ಮಾಡಿದ್ದು ಇಬ್ಬರು ಕೈಯಿಂದ ಹೊಡೆದಾಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಲಕ್ಷ್ಮಿ 3-4 ದಿನ ಕೆಲಸಕ್ಕೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ದಿಃ 03.02.2020 ರಂದು ಬೆಳಿಗ್ಗೆ ಆರೋಪಿಯು ಅಯ್ಯನಕೆರೆ ಹಾಡಿಯಿಂದ ಕೆಲಸಕ್ಕೆ ಜನರನ್ನು ಕರೆದುಕೊಂಡು ಬಂದಿದ್ದು ತಿತಿಮತಿಯಲ್ಲಿ ನಾನು, ಚಾಸಾ 8, 10 ಹಾಗೂ ಇತರರು ಜೀಪಿಗೆ ಹತ್ತಿದ್ದು ಆಗ ಲಕ್ಷ್ಮಿ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನಮ್ಮನ್ನು ಬಾಳೆಲೆಯಲ್ಲಿ ಕಾಫಿ ಕುಯ್ಯಲು ಬಿಟ್ಟು ಜೀಪಿನೊಂದಿಗೆ ವಾಪಸ್ಸು ಹೋಗಿದ್ದು, ಆ ದಿನ ಸಂಜೆ ಆರೋಪಿಯೊಂದಿಗೆ ಈಶ್ವರ ಎನ್ನುವವರು ಬಂದಿದ್ದು ಆರೋಪಿ ಸಂಜೆ



ವಾಪಸ್ ಹೋಗುವಾಗ ತಿತಿಮತಿಯಲ್ಲಿ ಇಳಿದುಕೊಂಡರು ಎಂದರೆ ಸರಿಯಲ್ಲ. ನಮ್ಮನ್ನು ಈಶ್ವರ ತಿತಿಮತಿಯಲ್ಲಿ ಬಿಟ್ಟು ಉಳಿದವರನ್ನು ಅಯ್ಯನಕೆರೆ ಕಡೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯು ಬಾಳೆಲೆ ಸಮೀಪ ಲಕ್ಷ್ಮಿ ವಿಷ ಕುಡಿಸಿ ಆಕೆಗೆ ಕರೆದುಕೊಂಡು ಹೋಗಿ ಹನಗೋಡು ಆಸ್ಪತ್ರೆಗೆ ದಾಖಲು ಮಾಡಿ ನಂತರ ಲಕ್ಷ್ಮಿಯನ್ನು ಆಕೆಯ ಮನೆಯವರು ಮೈಸೂರಿನ ಕೆ ಆರ್ ಅಸ್ಪತ್ರೆಗೆ ದಾಖಲು ಮಾಡಿದ್ದು ಆಕೆ ದಿಃ 10.02.2020 ರಂದು ಮೃತಪಟ್ಟ ವಿಚಾರ ಗೊತ್ತಾಯಿತು ಎಂದರೆ ಸರಿಯಲ್ಲ. ಪ್ರೀತಿ ವಿಚಾರದಲ್ಲಿ ಆರೋಪಿಗೂ ಹಾಗೂ ಲಕ್ಷ್ಮಿಗೂ ಜಗಳ ಆಗಿ ಲಕ್ಷ್ಮಿಯನ್ನು ಕೊಲ್ಲುವ ಉದ್ದೇಶದಿಂದ ಆರೋಪಿ ಬಾಳೆಲೆ ಸಮಿಪ ಲಕ್ಷ್ಮಿಗೆ ವಿಷ ಕುಡಿಸಿದ್ದರಿಂದ ಲಕ್ಷ್ಮಿ ಮೃತಪಟ್ಟ ವಿಚಾರ ನನಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ನಾನು ಈ ಬಗ್ಗೆ ಪೊಲೀಸರ ಸಮಕ್ಷಮ ದಿಃ 25.02.2020 ರಂದು ನನಗೆ ಈಗ ಓದಿ ಹೇಳಿದಂತೆ " ನಾನು —— ತಿಳಿದಿರುತ್ತದೆ" ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ನಿಪಿ 6 ಎಂದು

ಗುರುತಿಸಲಾಯಿತು. ಆರೋಪಿ ಲಕ್ಷ್ಮಿಯನ್ನು ಬಿಟ್ಟು ಚಾಸಾ 8 ರವರನ್ನು ಪ್ರೀತಿಸುತ್ತಿದ್ದರಿಂದ ಲಕ್ಷ್ಮಿ ಆರೋಪಿಯೊಂದಿಗೆ ಜಗಳ ಮಾಡಿದ್ದು, ಆ ಕಾರಣದಿಂದ ಆರೋಪಿ ಲಕ್ಷ್ಮಿಯನ್ನು ಕೊಲ್ಲುವ ಉದ್ದೇಶದಿಂದ ಆಕೆಗೆ ವಿಷ ಕುಡಿಸಿ ಆಕೆ ಮೃತಪಟ್ಟಿರುವ ವಿಚಾರ ಗೊತ್ತಿದ್ದರೂ ಕೂಡ ಹಾಗೂ ನಿಪಿ 6 ರಲ್ಲಿರುವ ಎಲ್ಲ ವಿಚಾರಗಳು ಗೊತ್ತಿದ್ದರೂ ಕೂಡ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

.4.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ**

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓಹೇಕೇ ಸರಿ ಇದೆ

Sd/-xxx

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಡಗು-ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ)